ಮೂರ್ನಾಡಿ ಕ್ಷೇತ್ರದಲ್ಲಿ ಜನಪರ ಪಕ್ಷದ ಅಭ್ಯರ್ಥಿ ಸಂಪಾತಿಯವರು ಕೇವಲ ಏಳುನೂರು ಮತಗಳಿಂದ ತಮ್ಮ ಸಮೀಪದ ಪ್ರತಿಸ್ಪರ್ಧಿ ಜಗದೀಶರನ್ನು ಸೋಲಿಸಿದ್ದಾರೆ!'

ಥತ್ತೇರಿಕಿ!

ಕಾಲ ಬಳಿಯಿದ್ದ ಚಂಬಿಗೆ ಬಲವಾಗಿ ಒದ್ದ ಋತುರಾಜ. ಈ ಮೂರುಕಾಸಿನ ಜಗದೀಶನನ್ನು ಬೆಂಬಲಿಸುವ ಬದಲು ಸಂಪಾತಿಯನ್ನೇ ಬೆಂಬಲಿಸಿದ್ದರೆ ನೇಮುವನ್ನಾದರೂ ಧೈರ್ಯದಿಂದ ತಡವಿ ಕೊಳ್ಳಬಹುದಿತ್ತೆಂದು ಹಳಹಳಿಸುತ್ತಲೇ ಮರುದಿನ ಮಧ್ಯಾಹ್ನವನ್ನು ಕಳೆದ. ಆದರೂ ಪರವಾಗಿಲ್ಲ. ಕಳೆದ ವರ್ಷ ಮೂರು ಸಾವಿರ ಮತದಷ್ಟಿದ್ದ ಸೋಲಿನ ಅಂತರ ಈ ಬಾರಿ ಬರೀ ಏಳ್ನೂರಕ್ಕೆ ಇಳಿದಿದೆ. ಈ ಬೆಳವಣಿಗೆಗಾಗಿ ದುಡಿದ ತನಗೆ ಏನಾದರೂ ಕೊಟ್ಟೇ ಕೊಡುತ್ತಾರೆ...

'ಕೊಡ್ಲೇ ಬೇಕು. ಅಲ, ನೀ ಅಷ್ಟೆಲ್ಲ ಒದ್ದಾಡಿದ್ದೀ. ಹ್ವಾಯಿ ಕೇಳು ಮಗಾ'

ಹಾಗಂತ ಚೀರುವ್ರೂ ಮಗನನ್ನು ಹುರಿದುಂಬಿಸುತ್ತಿರುವಾಗಲೇ ಫೋನು ರಿಂಗಾಯಿತು. ನೋಡಿದರೆ ಜಗದೀಶರ ಪಿಎ ಲಿಂಗರಾಜು! 'ಜಸ್ಟ್ ಮಿಸ್ಸಾಯ್ತು ರುತ್ತಣ್ಣ! ಒಂದೆರ್ಡ್ ಗ್ರಾಮ ಪಂಚಾಯ್ತಿಲಿ ಸರಿಯಾಗ್ ಓಟು ಬಿದ್ದಿದ್ರೆ ಸಾರೇ ಗೆಲ್ತಿದ್ರು. ಆದ್ರೂ ಇಷ್ಟು ಹತ್ರಕ್ಕೆ ಬಂದಿದಾರಲ್ಲ. ಎಲ್ಲ ನಿಮ್ಮಂಥ ಕಾರ್ಯಕರ್ತರ ಶ್ರಮ. ಸಂಜೆ ಆರ್ಗಂಟೆಗೆ ನಿಮ್ಮನ್ನ ಮನೆ ಹತ್ರ ಬರೋಕೇಳು ಅಂದಿದಾರೆ ಸಾರು'.

ಲಿಂಗರಾಜುವಿನ ಮಾತು ಕೇಳಿದ್ದೇ ಋತುರಾಜನ ಬೇಸರವೆಲ್ಲ ಕಲ್ಲಿನಿಂದ ಬಡಿಸಿಕೊಂಡ ನಾಯಿಯಂತೆ ಓಡಿಹೋಯಿತು. ಪಟಪಟ ಶರ್ಟು ಸಿಕ್ಕಿಸಿಕೊಂಡವನು 'ಇಕಳಿ ಕಾಫಿ' ಎಂದು ಬಂದ ಹೆಂಡತಿಗೆ 'ಜಗ್ದೀಶಣ್ಣನ್ ಮನ್ಯಂಗೆ ಎಣ್ಣೆ ಪಾರ್ಟಿನೇ ಇತ್ ಮಾರಾಯ್ತೀ' ಎಂದು ಬೈಕು ಹತ್ತಿ ಹೊರಟೇ ಬಿಟ್ಟ. ನೇಮುವನ್ನು ಹಣಿಯಲು ಮಾಡಬಹುದಾದ ತಂತ್ರಗಳನ್ನೂ, ಅದಕ್ಕೆ ಜಗದೀಶರಿಂದ ಪಡೆಯಬೇಕಾದ ನೆರವುಗಳನ್ನೂ ಗುಣಿಸಿ, ಭಾಗಿಸುತ್ತಲೇ ಅವರ ಮನೆ ತಲುಪಿದ. ಬಾಗಿಲಲ್ಲೇ ಇದ್ದ ಲಿಂಗರಾಜು, 'ಓ ಬನ್ನಿ. ಸಾರು ಒಳಗಿದಾರೆ' ಎನ್ನುತ್ತ ಅವನನ್ನು ಒಳಗೆ ಕರೆದುಕೊಂಡು ಹೋದ. ಋತು ಯುದ್ಧ ಗೆದ್ದ ದಂಡನಾಯಕನಂತೆ ಎದೆ ಉಬ್ಬಿಸಿಕೊಂಡು ನಡೆದ.

'ಮೆಟ್ಟಲ್ಲಿ ಹೋಡೀರೋ ಹಲ್ಕಾ ನನ್ಮಗನಿಗೆ!'

ಗಂಟೆಗಳಿಂದ ಕಾದು ಕುಳಿತಿದ್ದ ಚಿರತೆಯೊಂದು ಬೇಟೆಯ ಮೇಲೆರಗಿದಂತೆ ಋತುವಿನ ಮೈಮೇಲೆರಗಿದರು ಜಗದೀಶರು. 'ಪ್ರತೀ ಮನೆಗೂ ತಲೆಗೆ ಸಾವ್ರದಂತೆ ಕೊಡೋ ಅಂದ್ರೆ ಇನ್ನೂರು, ಮುನ್ನೂರು ಕೊಟ್ಟು ಉಳ್ದಿದ್ದನ್ನೆಲ್ಲ ನುಂಗಿ ಹಾಕಿದ್ಯೇನೋ ಬೋಳಿಮಗ್ನೇ, ಈ ಜಗ್ಗೂಗೇ ಗೊತ್ತಾಗ್ದಂಗೆ ಲಕ್ಷ ಲಕ್ಷ ನುಂಗ್ಬೋದು ಅಂದ್ಕಂಡ್ಯಲ, ಎಷ್ಟು ಚರ್ಬಿ ಇರ್ಬೇಡ ನಿಂಗೆ! ಇಡೀ ಬಣಗಲಿನಿಂದ ಮುನ್ನೂರು ಓಟೂ ಬಿದ್ದಿಲ್ಲ ಅಂದ್ರೆ ಅದಿನ್ನೆಷ್ಟು ದುಡ್ಡು ಹೊಡ್ಕಂಡಿರ್ಬೋದು ನೀನು! ಏನೋ ನಾನು ಸಹಾಯ ಮಾಡಿದ ಹುಡ್ಗ, ನಂಗೆ ಮೋಸ ಮಾಡಲ್ಲ ಅನ್ಕೋ ನಂಬಿಕೇಲಿ ಜಾಸ್ತಿ ವಿಚಾರಿಸಿಕೊಳ್ದೇ ನಂಬಿದ್ದಕ್ಕೆ ನಂಗೇ ಚೂರಿ ಹಾಕಿದ್ಯಾ? ನಿನ್ನ ಜೀವಸಹಿತ ಉಳ್ಸಲ್ಲ ನೋಡ್ತಿರು' ಎಂದು ಅಬ್ಬರಿಸಿದವರೇ ಋತುರಾಜನನ್ನು ನೆಲಕ್ಕೆ ಕೆಡವಿ ತುಳಿಯತೊಡಗಿದರು. ಹೊಟ್ಟೆ, ಬೆನ್ನು, ಮುಖ... ಒಂದೂ ನೋಡದೇ ತುಳಿದರು. ಯಬ್ಬಾ... ಆ... ಅಣಾ... ಬೇಡ ಅಣಾ... ಇನ್ನೊಂದ್ಸಲ ಹಿಂಗ್ ಮಾಡೂದಿಲ್ಲ ಬಿಟ್ಬಿಡಿ ಅಣಾ... ಎಂದು ನರಳುತ್ತ ಕಾಲು ಮೇಲಾದ ಗ್ವಾಂಕರ ಕಪ್ಪೆಯಂತೆ ಒದ್ದಾಡುತ್ತಿದ್ದವನಿಗೆ ಕೊನೆಯದಾಗಿ ಹೊಟ್ಟೆಗೊಂದು

